# *4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು*

*ಎಸ್‌ಸಿ.* **321/2017**

| | | | |
|---|---|---|---|
| **ಸಾಕ್ಷಿದಾರರ ಹೆಸರು** | ಃ ಶ್ರೀ ರವಿ ಜಿ | | *ಪ್ರಮಾಣ ಮಾಡಿಸಿದ ದಿನಾಂಕಃ* |
| **ತಂದೆ/ಗಂಡನ ಹೆಸರು** | ಃ ಶ್ರೀ ಗುರುರಾಜ ರಾವ್ | | **04.03.2021** |
| **ವಯಸ್ಸು** | ಃ **55 ವರ್ಷ** | | |
| **ವೃತ್ತಿ** | ಃ ಖಾಸಗಿ ವ್ಯವಹಾರ | | **ಪ್ರಾ.ಸಾ. ಃ 07** |
| **ವಾಸಸ್ಥಳ** | ಃ ಮೈಸೂರು | | **ಚಾ.ಸಾ. ಃ 06** |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

*1.* ಚಾಸಾ-*1* ಅವರು ನನಗೆ ಸುಮಾರು *13-14* ವರ್ಷಗಳಿಂದ ಗೊತ್ತು. ಚಾಸಾ-*1* ಅವರು ಮೀಡಿಯಾದಲ್ಲಿ ಕೆಲಸ ಮಾಡುತ್ತಿದ್ದರು. *2010* ನೇ ಸಾಲಿನಲ್ಲಿ ಚಾಸಾ-*1* ಮತ್ತು ಅವರ ಕೆಲವು ಸ್ನೇಹಿತರು ರೈಲ್ವೆ ಇಲಾಖೆಯಲ್ಲಿ ಉದ್ಯೋಗ ಸಲುವಾಗಿ ಅರ್ಜಿ ಸಲ್ಲಿಸಿದ್ದರು. ನ್ಯಾಯಾಲಯದಲ್ಲಿ ಹಾಜರು ಇರುವ *1* ನೇ ಆರೋಪಿ ಮತ್ತು ಇತರೇ ಇಬ್ಬರು ಆರೋಪಿಗಳು ಕೆಲಸ ಕೊಡಿಸುವ ಸಲುವಾಗಿ ತಲಾ ಅಭ್ಯರ್ಥಿಗಳಿಂದ *5* ಲಕ್ಷ ರೂಪಾಯಿಗಳನ್ನು ಮತ್ತು ಮುಂಗಡವಾಗಿ *10* ಲಕ್ಷ ರೂಪಾಯಿಗಳನ್ನು ಕೊಡುವಂತೆ ತಿಳಿಸಿದ ಬಗ್ಗೆ ಚಾಸಾ-*1* ಅವರು ನನಗೆ ತಿಳಿಸಿದ್ದರು. *1* ನೇ ಆರೋಪಿ ಮತ್ತು ಇತರೇ ಆರೋಪಿಗಳು ಕೆಲಸ ಕೊಡಿಸಿರಲಿಲ್ಲ ಮತ್ತು ಹಣ ವಾಪಸ್ಸು ಕೊಟ್ಟಿರಲಿಲ್ಲ ಅದೇ ಕಾರಣ ಚಾಸಾ-*1* ಅವರು ಹಣ ವಾಪಸ್ಸು ಕೊಡಿಸುವಂತೆ ನನಗೆ ಸಹಾಯ ಮಾಡುವಂತೆ ಹೇಳಿದ್ದರು.

*2. 2011* ನೇ ಸಾಲಿನಲ್ಲಿ *1* ನೇ ಆರೋಪಿಯನ್ನು ಬೆಂಗಳೂರಿನಲ್ಲಿ ಭೇಟಿ ಮಾಡಿ ಹಣ ವಾಪಸ್ಸು ಕೊಡುವಂತೆ ಇಲ್ಲದಿದ್ದರೆ ಪೋಲಿಸರಿಗೆ ದೂರು ನೀಡುವ ಬಗ್ಗೆ ತಿಳಿಸಿದ್ದೇವು. ಚಾಸಾ-*1* ಅವರ ಹೆಸರಿನಲ್ಲಿ ಬ್ಯಾಂಕ್ ಖಾತೆ ಇರಲಿಲ್ಲ ಅದೇ ಕಾರಣ *2011* ರಲ್ಲಿ *1* ನೇ ಆರೋಪಿ ನನ್ನ ಬ್ಯಾಂಕ್ ಖಾತೆಗೆ *3* ವರೆ ಲಕ್ಷ ರೂಪಾಯಿ ಜಮಾ ಮಾಡಿದ್ದಾರೆ. ಸದರಿ ಹಣವನ್ನು ನಾನು ಬ್ಯಾಂಕ್ ಖಾತೆಯಿಂದ ಪಡೆದು ಚಾಸಾ-*1* ಮತ್ತು ಅವರ ಇಬ್ಬರು ಸ್ನೇಹಿತರಿಗೆ ವಾಪಸ್ಸು ಕೊಟ್ಟಿದ್ದೇನೆ. ಚಾಸಾ-*1* ಮತ್ತು ಅವರ ಸ್ನೇಹಿತರು ಬಾಕಿ ಉಳಿದ ಹಣವನ್ನು ಕೊಡುವಂತೆ

ಆರೋಪಿಗಳ ಹತ್ತಿರ ಕೇಳಿದಾಗ ಕೊಟ್ಟಿರಲಿಲ್ಲ. *2015* ರಲ್ಲಿ ನ್ಯಾ ಮುಂದೆ ಇರುವ ಪಾರ್ಕಿನಲ್ಲಿ *1* ನೇ ಆರೋಪಿ ಮತ್ತು ಚಾಸಾ-*1* ಅವರ ನಡುವೆ ಗಲಾಟೆ ಆದ ಬಗ್ಗೆ ತಿಳಿದಿರುತ್ತೇನೆ.

*3.* *2015* ರಲ್ಲಿ ಲಕ್ಷ್ಮೀಪುರಂ ಪೊ.ಠಾಣೆ ಅವರು ನನಗೆ ಫೋನ್ ಮಾಡಿ ಕರೆಸಿಕೊಂಡು ಠಾಣೆಯಲ್ಲಿ ಇದ್ದ *1* ನೇ ಆರೋಪಿಯನ್ನು ನಾನು ಗುರುತಿಸಿದ್ದೇನೆ ಮತುತ ಹೇಳಿಕೆ ಕೊಟ್ಟಿದ್ದೇನೆ. ಬ್ಯಾಂಕ್ ಖಾತೆಯ ಕೊನೆಯ ಮೂರು ಸಂಖ್ಯೆ *997* ಇರುತ್ತದೆ. ನನಗೆ ಈಗ ತೋರಿಸಿದಂತೆ ನನ್ನ ಬ್ಯಾಂಕ್ ಖಾತೆಗೆ *3* ವರೆ ಲಕ್ಷ ರೂಪಾಯಿ ಜಮಾ ಆಗಿದೆ. ಸದರಿ ದಾಖಲೆ ನೋಟರಿ ಪ್ರತಿಯನ್ನು ನಿಪಿ-*4* ಎಂದು ಗುರುತಿಸಲಾಯಿತು. ಸಂಬಂಧಪಟ್ಟ ಭಾಗವನ್ನು ನಿಪಿ-*4(ಎ)* ಎಂದು ಗುರುತಿಸಲಾಯಿತು.

***ಮರು ವಿಚಾರಣೆ:- ಇಲ್ಲ.***

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

***ಓ ಹೇ ಕೇ ಸ ಇ ಎ ಒ.,***

***4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,***
***ಮೈಸೂರು***